# ಬಾಕ್ಸಿಂಗ್ ರಿಂಗ್‌ನ 'ಚಿನ್ನ' ಮೀನಾಕ್ಷಿ

■ ಗಿರೀಶ ದೊಡ್ಡಮನಿ

ಹರಿಯಾಣದ ರೋಹ್ಟಕ್ ಸಮೀಪದ ಸಣ್ಣ ಹಳ್ಳಿ ರೂರ್ಕಿ. ಕಳೆದೊಂದು ವಾರದಿಂದ ಆ ಊರಲ್ಲಿ ಹಬ್ಬದ ವಾತಾವರಣ ಇದೆ. ಅದಕ್ಕೆ ಕಾರಣ ಆ ಗ್ರಾಮದ ಹುಡುಗಿ ಮೀನಾಕ್ಷಿ ಹೂಡಾ.

ಲಿವರ್‌ಪೂಲ್‌ನಲ್ಲಿ ಈಚೆಗೆ ನಡೆದ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ 48 ಕೆ.ಜಿ. ಮಹಿಳೆಯರ ವಿಭಾಗದಲ್ಲಿ 24 ವರ್ಷದ ಮೀನಾಕ್ಷಿ ಚಿನ್ನ ಗೆದ್ದರು. ಅದರೊಂದಿಗೆ ರೂರ್ಕಿಯಲ್ಲಿ ಸಂಭ್ರಮದ ಹೊನಲು ಹರಿಯಿತು.

ಮೀನಾಕ್ಷಿಯ ಪುಟ್ಟ ಮನೆಯ ಮುಂದೆ ಜನಜಂಗುಳಿ ಸೇರಿತು. ಮೀನಾಕ್ಷಿ ತಮ್ಮ ಬಾಲ್ಯದಲ್ಲಿ ಕೈಗಳಿಗೆ ಬಾಕ್ಸಿಂಗ್ ಗ್ಲೌಸ್ ಧರಿಸಿದಾಗ ವ್ಯಂಗ್ಯವಾಡಿದ್ದವರು, 'ಮುಖ ಮೂತಿಗೆ ಪೆಟ್ಟು ಬಿದ್ದು ಊನವಾದರೆ ಮುಂದೆ ಯಾರು ನಿನ್ನ ಮದುವೆ ಆಗ್ತಾರೆ. ಅಪ್ಪ, ಅಮ್ಮನಿಗೆ ಹೊರೆಯಾಗಬೇಡ, ಲಕ್ಷಣವಾಗಿ ಮನೆ ಕೆಲಸ ಕಲ್ಕೊಂಡು ಇರು' ಎಂದ ಆಜುಬಾಜು ಮನೆಯವರೆಲ್ಲರೂ ಆ ಜನಜಂಗುಳಿಯ ಭಾಗವಾಗಿದ್ದರು. ಅವರಲ್ಲಿಯೇ ಕೆಲವರು 'ಮೀನಾಕ್ಷಿ ನಮ್ಮ ಕಣ್ಮುಂದೆ ಬೆಳೆದ ಹುಡುಗಿ. ಆಕೆ ಸಾಧನೆಯಿಂದ ನಮಗೆ ಸಂತೋಷವಾಗಿದೆ' ಎಂದು ಹೇಳುತ್ತಿದ್ದರು.

ಹೌದು; ವ್ಯಂಗ್ಯ, ಅವಮಾನ, ಬಡತನ, ಕಷ್ಟನಷ್ಟಗಳಿಗೆಲ್ಲ ಸಾಧನೆಗಳೇ ಉತ್ತರವಾಗಬೇಕು. ಲಿವರ್‌ಪೂಲ್‌ನಲ್ಲಿ 48 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ರಿಂಗ್‌ಗೆ ಬಂದು ನಿಂತ ಮೀನಾಕ್ಷಿಯ ಮನದಲ್ಲಿ ತನ್ನ ಬಾಲ್ಯದ ಬವಣೆಗಳು, ಯಾರಿಂದಲೋ ಬಾಡಿಗೆ ಪಡೆದ ಆಟೊ ರಿಕ್ಷಾ ಚಾಲನೆ ಮಾಡುತ್ತಿದ್ದ ಅಪ್ಪನ ಶ್ರಮ, ಒಂದೆಡೆ ಸಂಸಾರದ ಕಷ್ಟ, ಇನ್ನೊಂದೆಡೆ ಮಗಳ ಕನಸು ಕಮರದಂತೆ ನೋಡಿಕೊಳ್ಳುವ ಸವಾಲಿನ ಕಣ್ಣೀರನ್ನು ತನ್ನ ಸೀರೆ ಸೆರಗಿನಲ್ಲಿ ಇಂಗಿಸುತ್ತಿದ್ದ ಅಮ್ಮನ ಮುಖಭಾವ ಹಾದುಹೋಗಿದ್ದವು.

ತಾವು ಜೀವನದಲ್ಲಿ ಅನುಭವಿಸಿದ್ದ ಕಡುಕಷ್ಟಗಳ ಮುಂದೆ ಮೀನಾಕ್ಷಿಯವರಿಗೆ ತಮ್ಮ ಎದುರಾಳಿ ಕಜಾಕಸ್ತಾನದ ನಾಝೀಂ ಕೈಝ್ಬೆಯ ಸವಾಲು ಕಠಿಣ ಅನಿಸಲೇ ಇಲ್ಲ. 32 ವರ್ಷದ ನಾಝೀಂ ಏನೂ ಸಾಮಾನ್ಯ ಸ್ಪರ್ಧಿಯಲ್ಲ. ಅವರು ಹೋದ ವರ್ಷ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದವರು. ಮೂರು ಬಾರಿ ಐಬಿಎ ವಿಶ್ವ ಬಾಕ್ಸಿಂಗ್‌ನಲ್ಲಿ ಚಿನ್ನದ ಪದಕ ಜಯಿಸಿದವರು. ಎರಡು ಏಷ್ಯನ್ ಗೇಮ್ಸ್ ಪದಕ ಗಳಿಸಿದವರು. ಅಂತಹ ಎದುರಾಳಿಯನ್ನು ಮೀನಾಕ್ಷಿ ಮಣಿಸಿದರು. ಚಿನ್ನದ ಪದಕಕ್ಕೆ ಕೊರಳೊಡ್ಡಿದರು. 2022ರಲ್ಲಿ ಏಷ್ಯನ್ ಅಮೆಚೂರ್ ಬಾಕ್ಸಿಂಗ್‌ನಲ್ಲಿ ಬೆಳ್ಳಿ ಪದಕ ಪಡೆದಿದ್ದ ಮೀನಾಕ್ಷಿ ಈಗ ವಿಶ್ವ ಚಾಂಪಿಯನ್ ಆಗಿದ್ದಾರೆ.

ಇದರೊಂದಿಗೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದ ಭಾರತದ ಮಹಿಳಾ ಬಾಕ್ಸಿಂಗ್ ಕ್ರೀಡಾಪಟುಗಳ ಪಟ್ಟಿಗೆ ಮೀನಾಕ್ಷಿ ಸೇರ್ಪಡೆಯಾದರು. ಆರು ಸಲ ವಿಶ್ವ ಚಾಂಪಿಯನ್ ಆಗಿರುವ ಮೇರಿ ಕೋಮ್ (2002, 2005, 2006, 2008, 2010 ಮತ್ತು 2018), ಎರಡು ಬಾರಿ ಚಾಂಪಿಯನ್ ನಿಖತ್ ಜರೀನ್ (2022 ಮತ್ತು 2023), ಸರಿತಾ ದೇವಿ (2006), ಜೆನ್ನಿ ಆರ್.ಎಲ್ (2006), ಕೆ.ಸಿ. ಲೇಖಾ

